**ಇಂದು ದಿನಾಂಕ 20.02.2026 ರಂದು ಪಿಡಬ್ಲ್ಯೂ -1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3, 5 ಮತ್ತು 7 ನೇ ಪ್ರತಿವಾದಿಯರ ಪರ ವಕೀಲರಿಂದಃ**

**1.** ನನ್ನ ತಾತನಿಗೆ ಆಸ್ತಿಗಳು ಮಂಜೂರಾಗಿತ್ತು ಎಂದು ತೋರಿಸಲು ಆದೇಶವನ್ನು ಕೊಟ್ಟಿದ್ದೇನೆ. ನನ್ನ ತಾತ ಹೇಳಿಕೆಯಲ್ಲಿ ನಮ್ಮ ಕುಟುಂಬದ ಒಟ್ಟು 9 ಜನಕ್ಕೆ ಪಾಲು ಇದೆ ಎಂದು ಹೇಳು ಬರೆಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾತನಿಗೆ 16 ರಲ್ಲಿ 1 ಭಾಗ ಇತ್ತು ಎಂದರೆ ಸರಿಯಲ್ಲ. ನನ್ನ ತಾತನಿಗೆ ಬಂದ ಭಾಗವನ್ನು ಅವರು ಬದುಕಿದ್ದಾಗಲೇ 1, 5 ಮತ್ತು 7 ನೇ ಪ್ರತಿವಾದಿಯರ ತಂದೆಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅವರು ಸುಳ್ಳು ದಾಖಲೆಗಳನ್ನು ಯಾವಾಗ ಪಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಪ್ರತಿವಾದಿಗಳಿಗೆ ಖಾತೆಯಾಗಿ 1960-70 ನೇ ಸಾಲಿನಲ್ಲಿ ಸ್ವಾಧೀನಕ್ಕೆ ಬಂದಿದ್ದಾರೆ ಎಂದರೆ ಸರಿಯಲ್ಲ ಅವರು ಸುಳ್ಳು ದಾಖಲೆಗಳನ್ನು ಮಾಡಿಕೊಂಡಿದ್ದಾರೆ. ನನ್ನ ತಾತ ಅವರ ಭಾಗವನ್ನು ಮಾರಾಟ ಮಾಡಿರುವ ಕಾರಣ ನನಗೆ ಮತ್ತು ನಮ್ಮ ಕುಟುಂಬದವರಿಗೆ ಹಕ್ಕು ಇಲ್ಲದಿದ್ದರೂ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**